ದಿನಾಂಕ: 31 .07.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಜಿ ಸಿ ಎಂ ವಕೀಲರಿಂದಃ**

ನನ್ನ ಮಾವನ ಹೆಸರು ಕಂಪಳಪ್ಪ. ನಿಪಿ-1 ರಲ್ಲಿರುವ ಹೆಸರು ಸರಿ ಇದೆಯಾ ಅಥವಾ ನಿಪಿ-15 ರಲ್ಲಿರುವ 15(ಎ) ಎಂದು ಗುರುತಿಸಲಾಗಿರುವ ಹೆಸರು ಸರಿ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎರಡು ಒಂದೇ ಎಂದು ನುಡಿಯುತ್ತಾರೆ. ಆ ಎರಡು ಹೆಸರು ಒಂದೇ ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ನಾನು ತಹಶೀಲ್ದಾರ್ ಕಛೇರಿಯಲ್ಲಿ ಕೆಲಸ ಮಾಡಿದ ವ್ಯಕ್ತಿ ಎಂದರೆ ನಿಜ. ಮೊದಲು ಲಿಸ್ಟ್ ಮಾಡಿ ನಂತರ ಹಕ್ಕು ಪತ್ರ ತಯಾರಿಸುತ್ತಾರೆ ಲಿಸ್ಟ್ ನಲ್ಲಿ ಏನು ಹೆಸರು ನಮೂದಾಗುತ್ತದೆಯೋ ಅದೇ ದಾಖಲೆ ಕೊಡಬೇಕಾಗುತ್ತದೆ ಎಂದರೆ ನಿಜ. ನಿಪಿ-1 ರಲ್ಲಿರುವ ಹೆಸರು ಮತ್ತು ನಿಪಿ-15 ರ 15(ಎ) ರಲ್ಲಿನ ಹೆಸರು ಬೇರೆ ಬೇರೆ ಎಂದರೆ ಸರಿಯಲ್ಲ. ಲಿಸ್ಟ್ ನಲ್ಲಿ ಹೆಸರು ಇದೆ ಎನ್ನುವ ವಿಚಾರ ಕೋರ್ಟಿಗೆ ಹಾಕಿದಾಗ ಗೊತ್ತಾಗುತ್ತದೆ. ನಿಪಿ-15 ರಲ್ಲಿ ಆ ಲಿಸ್ಟನ್ನು ಯಾವ ದಿನಾಂಕ ತಯಾರಾಗಿದೆ ಎಂದು ನಮೂದು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಾಗುವುದಿಲ್ಲ. ನಾನು ಎಂ ಎ ಸೋಷಿಯಾಲಜಿ ವಿದ್ಯಾಭ್ಯಾಸ ಮಾಡಿದ್ದೇನೆ. ನಿಪಿ-15 ರಲ್ಲಿ ದಿನಾಂಕ ನಮೂದು ಇಲ್ಲದೇ ಇದ್ದುದ್ದರಿಂದ ನನಗೆ ದಿನಾಂಕ ಹೇಳಲು ಬರುವುದಿಲ್ಲ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ. ನಿಪಿ-15 ರಲ್ಲಿ ನಿಮ್ಮ ಹೆಂಡತಿ ಎಂದು ಹೇಳಲಾದ ವ್ಯಕ್ತಿಗಿಂತ ಮೊದಲು ಯಾವ ಕೆಟಗರಿ ಎಂದು ನಮೂದು ಆಗಿದ್ದು ನಿಮ್ಮ ಹೆಂಡತಿ ಎಂದು ಹೇಳುವ ವ್ಯಕ್ತಿ ಎದುರುಗಡೆ ಯಾವ ಕೆಟಗರಿ ಎಂದು ನಮೂದಾಗಿಲ್ಲ ಎಂದರೆ ಸರಿ. ಲಿಸ್ಟ್ ನ್ನು ಮೊದಲು ತಯಾರಿಸಿ ಸಹಿ ಮಾಡಿದ ಪಿ ಡಿ ಒ ರವರ ಸಹಿ ಕೆಳಗೆ ದಿನಾಂಕ ನಮೂದಿಸಿಲ್ಲ ಎಂದರೆ ನಿಜ. ಸದರಿ ಇಲಾಖೆಯಿಂದ ಲಿಸ್ಟ್ ತಯಾರಿಸಿದ ಬಗ್ಗೆ ನಿಮಗೆ ಯಾವುದೇ ಇಂಟಿಮೇಷನ್ ಆಗಲೀ ಲೆಟರ್ ಆಗಲಿ ಬಂದಿತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ಲಿಸ್ಟ್ ತಯಾರಿಸಿದ ಬಗ್ಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 1972 ರಲ್ಲಿ ನನ್ನ ಮದುವೆಯಾಗಿರುತ್ತದೆ . ಮದುವೆಯಾದ ಕಾಲಕ್ಕೆ ನಾನು

ಕೆಲಸದಲ್ಲಿ ಇದ್ದೆ. ಮದುವೆಯಾದ ತಕ್ಷಣ ನಿಮ್ಮ ಎಸ್ ಆರ್ ನಲ್ಲಿ ನಿಮ್ಮ ಹೆಂಡತಿ ಹೆಸರು ನಮೂದಾಗಿದೆಯೇ ಎಂದರೆ ಸಾಕ್ಷಿ ಎಸ್ ಆರ್ ನೋಡಬೇಕು ಎಂದು ನುಡಿಯುತ್ತಾರೆ. 1975 ರಲ್ಲಿ ಸೈಟ್ ಗ್ರಾಂಟ್ ಆಗಿರುತ್ತದೆ . ಸೈಟ್ ಗ್ರಾಂಟ್ ಆದಾಗ ನಾನು ಹಿರಿಯೂರಿನಲ್ಲಿ ವಾಸವಾಗಿದ್ದೆ. ನನ್ನ ಹೆಂಡತಿ ಬದುಕಿರುವವರೆಗೆ ನನ್ನ ಜೊತೆ ವಾಸವಾಗಿದ್ದರು. ನನ್ನ ಹೆಂಡತಿ ತಂದೆಯೇ ಮಾಡಿಸಿದ್ದರಿಂದ ಲಿಸ್ಟ್ ನಲ್ಲಿ ಅವರ ತಂದೆ ಹೆಸರು ಬಂದಿರುತ್ತದೆ. ನನ್ನ ಹೆಂಡತಿ ತಂದೆಗೆ ಸೈಟ್ ಗ್ರಾಂಟ್ ಆಗಿರುವುದಿಲ್ಲ. ನಿಮ್ಮ ಹೆಂಡತಿ ತಂದೆ ಅರ್ಜಿ ಕೊಟ್ಟು ಮಗಳ ಹೆಸರಿಗೆ ಮಾಡಿಸಿ ಎಂದು ತಿಳಿಸಿದ್ದಾರ ಎಂಬ ಪ್ರಶ್ನೆಗೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಂಪಳಪ್ಪನವರು 1975 ರಲ್ಲಿ ಬದುಕಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಪೂರ್ವದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಭಾವವನ್ನು ಭೀರಿ ನಿಪಿ-15 ನ್ನು ಸೃಷ್ಟಿಸಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಅದರ ಆಧಾರದ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-15 ರಂತೆ ನನ್ನ ಹೆಂಡತಿಗೆ ಆಸ್ತಿಯನ್ನು ಮಂಜೂರು ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು